ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT: ಪಿ.ಎ.ಸಿ. (ಸಮಿತಿ)
ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ
ದಿನಾಂಕ : DATE : 10-6-20

### ದಾಖಲೆಗಳ ಸಹಿತ ಸಭಾಧ್ಯಕ್ಷರಿಗೂ ಮತ್ತೊಂದು ಪತ್ರ ಬರೆಯಲು ತೀರ್ಮಾನ

# ಖರೀದಿ ಅವ್ಯವಹಾರ: ವರದಿಗೆ ನಿರ್ದೇಶನ

10-6-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ನಿರ್ವಹಣೆ ತುರ್ತು ಸಂದರ್ಭದಲ್ಲಿ ವೈದ್ಯಕೀಯ ಸಲಕರಣೆ ಮತ್ತು ಔಷಧಿ ಸಾಮಗ್ರಿಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸಮಗ್ರ ಮಾಹಿತಿಯೊಂದಿಗೆ ವರದಿ ನೀಡುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಅವರಿಗೆ ವಿಧಾನ ಮಂಡಲ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ(ಪಿಎಸಿ) ನಿರ್ದೇಶನ ನೀಡಿದೆ.

ಸಲಕರಣೆಗಳನ್ನು ಖರೀದಿ ಮಾಡಿರುವ ಸರ್ಕಾರದ ಅಧೀನ ಸಂಸ್ಥೆಯಾದ


ಎಚ್.ಕೆ. ಪಾಟೀಲ

ಕರ್ನಾಟಕ ಸ್ಟೇಟ್ ಡ್ರಗ್ಸ್ ಲಾಜಿಸ್ಟಿಕ್ಸ್ ಮತ್ತು ವೇರ್ ಹೌಸಿಂಗ್ ಸೊಸೈಟಿ (ಕೆ ಎ ಸ್ ಡಿ ಎ ಲ್ ಡ ಬ್ಲ್ಯೂ ಎ ಸ್) ವಿರುದ್ಧ ಗಂಭೀರ ಮತ್ತು ಕ್ರಿಮಿನಲ್ ಸ್ವರೂಪದ ಆರೋಪಗಳಿವೆ. ಈ ಹಿನ್ನೆಲೆಯಲ್ಲಿ ತನಿಖೆಗೆ ಅವಕಾಶ ನೀಡುವಂತೆ ವಿಧಾನಸಭೆ ಅಧ್ಯಕ್ಷರಿಗೆ ಮತ್ತೊಮ್ಮೆ ಪತ್ರ ಬರೆದು ಒತ್ತಡ ಹೇರಲು ಮಂಗಳವಾರ ನಡೆದ ಪಿಎಸಿ ಸಭೆ ನಿರ್ಧರಿಸಿದೆ.

ಶಾಸಕ ಎಚ್.ಕೆ. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಶಾಸಕರಾದ ಕೆ.ಆರ್. ರಮೇಶ್‌ಕುಮಾರ್, ಎ.ಟಿ.ರಾಮಸ್ವಾಮಿ, ಈಶ್ವರ ಖಂಡ್ರೆ, ಉಮೇಶ್ ಕತ್ತಿ, ಸಿ.ಎಂ. ಇಬ್ರಾಹಿಂ, ಬಸವರಾಜ ಪಾಟೀಲ ಇಟಗಿ, ಟಿ.ಎ.ಶರವಣ, ವೈ.ಎ. ನಾರಾಯಣಸ್ವಾಮಿ, ನಾಗೇಶ್, ಎಂ.ಸಿ. ವೇಣುಗೋಪಾಲ. ಎ.ಎಸ್. ಪಾಟೀಲ ನಡಹಳ್ಳಿ, ಎಲ್.ಎ. ರವಿ ಸುಬ್ರಹ್ಮಣ್ಯ, ಯಶವಂತಗೌಡ ಪಾಟೀಲ ಸೇರಿ ಬಹುತೇಕ ಸದಸ್ಯರು ಭಾಗವಹಿಸಿದ್ದರು.

ಗಂಭೀರ ಸ್ವರೂಪದ ಅವ್ಯವಹಾರ ನಡೆದಿದೆ ಎಂಬ ದೂರು ಬಂದಾಗ ತನಿಖೆ ಮಾಡಲು ಸಮಿತಿಗೆ ಅಧಿಕಾರ ಇದೆ. ಸಮಿತಿಯ ಕಾರ್ಯಕಲಾಪಕ್ಕೆ ಸಭಾಧ್ಯಕ್ಷರು ಅಡ್ಡಿಪಡಿಸಬಾರದು. ಪ್ರಕರಣದ ಗಂಭೀರತೆ ಅರ್ಥ ಮಾಡಿಸಲು ಸಮಿತಿಗೆ ಬಂದಿರುವ ದೂರು ಮತ್ತು ದಾಖಲೆ ಪತ್ರಗಳನ್ನು ಒಳಗೊಂಡ ಪತ್ರವನ್ನು ಸಭಾಧ್ಯಕ್ಷರಿಗೆ ಬರೆಯುವುದು ಸೂಕ್ತ ಎಂದು ಸದಸ್ಯರು ಸಭೆಯಲ್ಲಿ ಅಭಿಪ್ರಾಯಪಟ್ಟರು.

'ಅವ್ಯವಹಾರ ಆರೋಪದ ಸಂಬಂಧ ಪೂರ್ಣ ಪ್ರಮಾಣದ ದಾಖಲೆಗಳನ್ನು ಕಲೆ ಹಾಕಿರುವ ಕರ್ನಾಟಕ ರಾಷ್ಟ್ರ ಸಮಿತಿಯು ಮತ್ತೊಂದು ದೂರನ್ನು ಮಂಗಳವಾರ ಪಿಎಸಿಗೆ ಸಲ್ಲಿಸಿದೆ. ಈ ದೂರು ಮತ್ತು ದಾಖಲೆಗಳನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೂ ಕಳುಹಿಸಲಾಗಿದೆ. ಸಮಗ್ರ ಮಾಹಿತಿ ಒಳಗೊಂಡ ವರದಿ ಮಂಡಿಸಲು ತಿಳಿಸಲಾಗಿದೆ. ಅವರು ಮಂಡಿಸುವ ವರದಿ ತೃಪ್ತಿಕರವಾಗಿಲ್ಲದಿದ್ದರೆ ಖುದ್ದು ಹಾಜರಾಗಿ ವಿವರಣೆ ನೀಡಲು ನಿರ್ದೇಶನ ನೀಡಲಾಗುವುದು' ಎಂದು ಸಮಿತಿ ಅಧ್ಯಕ್ಷ ಎಚ್.ಕೆ. ಪಾಟೀಲ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕೊರೊನಾ ಸೋಂಕು ಪರೀಕ್ಷಾ ಕಿಟ್, ಪಿಪಿಇ ಕಿಟ್, ಸ್ಯಾನಿಟೈಸರ್, ಗ್ಲೂಕೋಸ್, ವೆಂಟಿಲೇಟರ್‌ಗಳ ಖರೀದಿಯಲ್ಲಿ ನಡೆದಿರುವ ಅವ್ಯವಹಾರದ ಕುರಿತು ಸಮಗ್ರ ವರದಿಯನ್ನು ಮೇ 28ರಂದು 'ಪ್ರಜಾವಾಣಿ' ಪ್ರಕಟಿಸಿತ್ತು.